**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.146/2022**

| | | |
|---|---|---|
| ಸಾಕ್ಷಿದಾರರ ಹೆಸರು | : | ತಿಮ್ಮಣ್ಣ |
| ತಂದೆಯ/ಗಂಡನ ಹೆಸರು | : | ತಿಮ್ಮಪ್ಪ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಕಲ್ಲು ಕ್ವಾರಿ ಕೆಲಸ |
| ವಾಸ ಸ್ಥಳ | : | ಕೆರೆಗುಡಿಹಳ್ಳಿ |

ಪಿ.ಡಬ್ಲ್ಯೂ 7

ಸಿ.ಡಬ್ಲ್ಯೂ 8

ದಿ: 16.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಸುಮಾರು 7-8 ವರ್ಷಗಳಿಂದ ಕಲ್ಲು ಕ್ವಾರಿ ಕೆಲಸ ಮಾಡುತ್ತಿದ್ದೇನೆ. ಕಲ್ಲು ಕ್ವಾರಿ ಕೆಲಸಕ್ಕೆ ಸ್ಫೋಟಕ ವಸ್ತುವನ್ನು ಬಳಸುತ್ತಾರೆ. ದಿನಾಂಕಃ 04.03.2021 ರಂದು ಮಾಯಕೊಂಡ ಪೋಲೀಸ್ ಠಾಣೆ ರವರು ನನಗೆ ಕುರ್ಕಿ ಬಳಿಯ explosive ಪದಾರ್ಥ ಇದೆ ಎಂದು ಅದು ಏನು ಎಂದು ಹೇಳಲು ನನಗೆ ಕರೆದಿದ್ದರು. ನಾನು ಕಲ್ಲು ಕ್ವಾರಿ ಕೆಲಸ ಮಾಡುತ್ತಿರುವ ಕಾರಣ ಸ್ಫೋಟಕ ವಸ್ತುಗಳ ಬಗ್ಗೆ ಅನುಭವ ಇದ್ದು ಸ್ಥಳ ಕ್ಕೆ ಹೋಗಿ ಅವುಗಳನ್ನು ನೋಡಿದಾಗ ಅಲ್ಲಿ ಒಟ್ಟು 18 ವಸ್ತುಗಳು ಇದ್ದವು . ಅವುಗಳಲ್ಲಿ 11 ಸ್ಫೋಟಕ ವಸ್ತುಗಳು ಇದ್ದವು. ಇತರೆ ಕಬ್ಬಿಣದ ವಸ್ತುಗಳು ಇದ್ದವು. ಆ ಕಬ್ಬಿಣದ ವಸ್ತುಗಳು ಈ ದಿನ ನ್ಯಾಯಾಲಯದ ಮುಂದಿರುವ ಎಂ ಒ 1 ರಿಂದ 10 ಇರುತ್ತದೆ ಅದನ್ನು ನೋಡಿ ಸಾಕ್ಷಿದಾರರು

ಗುರುತಿಸಿರುತ್ತಾರೆ. ಉಳಿದಂತಹ ಸ್ಫೋಟಕ ವಸ್ತುಗಳನ್ನು ಕಾಡಜ್ಜಿಯ ದುರ್ಗ explosive ಗೋಡೋನ್ ನಲ್ಲಿ ಶೇಖರಣೆ ಮಾಡಿರುತ್ತಾರೆ. ಎಂ ಒ 1 ರಿಂದ 10 ನ್ನು ನಾನೇ ಹೇಳಿ ಪೋಲೀಸರಿಗೆ ಬರೆಸಿರುತ್ತೇನೆ. ಸ್ಫೋಟಕ ವಸ್ತುಗಳ ವಿವರಣೆ ಸಹ ನಾನೇ ಹೇಳಿ ಬರೆಸಿರುತ್ತೇನೆ. ಈಗ ತೋರಿಸಿದ ನಿ.ಪಿ- 1 ರಲ್ಲಿ ನನ್ನ ಸಹಿ ಇದ್ದು ಅದನ್ನು ನಿ.ಪಿ- 1(ಇ) ಎಂದು ಗುರುತಿಸಲಾಯಿತು. ನಿ.ಪಿ- 1 ರಲ್ಲಿ ಇರುವ ವಿವರಣೆಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಆ ಸಮಯದಲ್ಲಿ ತೆಗೆದಿರುವ ಪೋಟೋ ನಿ.ಪಿ- 1 ರಿಂದ 3 ಇರುತ್ತದೆ.

**ಪಾಟೀ ಸವಾಲುಃ ಶ್ರೀ .ಬಿ ಬಿ ಆರ್ ವಕೀಲರಿಂದ ಆರೋಪಿತರ ಪರವಾಗಿ**:

2. ನಾನು ನಮ್ಮೂರಿನಲ್ಲಿ ಕಲ್ಲು ಕ್ವಾರಿ ಕೆಲಸ ಮಾಡುತ್ತಿದ್ದೇನೆ. ಸ್ಫೋಟಕ ವಸ್ತುಗಳ ಬಗ್ಗೆ ನನಗೆ ಪರಿಣಿತಿ ಇಲ್ಲ ಎಂದರೆ ನಾನು ಕಲ್ಲು ಕ್ವಾರಿ ಕೆಲಸ ಮಾಡುತ್ತಿರುವುದರಿಂದ ನನಗೆ ಅದರ ಬಗ್ಗೆ ಅನುಭವ ಇದೆ. ಎಂ ಒ 1 ರಿಂದ 10 ರ ಮೇಲೆ ನನ್ನ ಸಹಿಯನ್ನು ಪಡೆದುಕೊಂಡಿಲ್ಲ. ಪೋಲೀಸರು ಅ ಸ್ಥಳ ಕ್ಕೆ ಬರಲು ನನಗೆ ನೋಟೀಸು ನೀಡಿಲ್ಲ ಸಾಕ್ಷಿಃದಾರರು ಹೇಳುತ್ತಾರೆ ಅವರು ನನಗೆ ಕರೆದಿದ್ದರು ಎನ್ನುತ್ತಾರೆ. ಮಹಜರನ್ನು ಪೋಲೀಸರು ಬರೆದರು ಆ ಮಹಜರನ್ನು ಬರೆಯಲು ಯಾರು ಹೇಳಿದರು ಎಂದರೆ ನನಗೆ ಗೊತ್ತಿಲ್ಲ. ಪೋಲೀಸರು ಎಲ್ಲಾ ಬರೆದ ನಂತರ ಸಹಿ ಹಾಕಲು ಹೇಳಿದರು ನಾನು ಸಹಿ ಹಾಕಿದೆ. ಅದರ ಬರೆದ ವಿಷಯ ನಾನು ಓದಿ ತಿಳಿದುಕೊಂಡಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಆ ಸ್ಥಳ ಕ್ಕೆ ಹೋದಾಗ ಆ ಸಮಯದಲ್ಲಿ ಯಾರೂ ಕಲ್ಲು ಕ್ವಾರಿ ಕೆಲಸ ಮಾಡುತ್ತಿರಲಿಲ್ಲ. ಕಲ್ಲು ಕ್ವಾರಿ ಅಲ್ಲಿ 1 ರಿಂದ ಒಂದೂವರೆ ಕಿಲೋ ಮೀಟರ್ ಅಂತರದಲ್ಲಿ ಇತ್ತು. ನಾನು ಕಲ್ಲುಕ್ವಾರಿಯನ್ನು ಕಾಣ್ಣಾರೆ ನೋಡಿಲ್ಲ. ಸ್ಥಳಕ್ಕೆ ಹೋಗಿದ್ದರೆ ಅಲ್ಲಿ ಕಲ್ಲು ಕ್ವಾರಿ ಕೆಲಸ ನಡೆಯುತ್ತಿತ್ತೊ ಇಲ್ಲವೂ ತಿಳಿಯುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.